SRI DEVARAJ URS ACADEMY OF HIGHER EDUCATION & RESEARCH
SRI DEVARAJ URS MEDICAL COLLEGE
Tamaka, Kolar
UNIVERSITY LIBRARY & LEARNING RESOURCE CENTRE

ವಿಜಯವಾಣಿ

Online Newspaper Clipping Service
Dtd-Saturday, 29th, August- 2020

Page No.03

# ಆರ್‌ಎಲ್‌ಜೆ ಸೇವೆ ರಾಜ್ಯಕ್ಕೆ ಮಾದರಿ

ಕೋಲಾರ: ಬಡವರ ಬಗ್ಗೆ ಕಾಳಜಿ ಹೊಂದಿರುವ ಮಾಜಿ ಸಂಸದ ಆರ್.ಎಲ್.ಜಾಲಪ್ಪ ಉಚಿತ ಆರೋಗ್ಯ ಸೇವೆ, ಶಿಕ್ಷಣ ಹಾಗೂ ಜನರಿಗೆ ಅನುಕೂಲಕ್ಕಾಗಿ ಶಾಲೆ, ಪುನರ್ವಸತಿ ಕೇಂದ್ರ ನಿರ್ಮಿಸಿಕೊಡುವ ಮೂಲಕ ರಾಜ್ಯಕ್ಕೆ ಮಾದರಿಯಾಗಿದ್ದಾರೆಂದು ಶಾಸಕ ಕೆ.ಶ್ರೀನಿವಾಸಗೌಡ ಪ್ರಶಂಸಿದರು.

ನಗರದ ಕೀಲುಕೋಟೆ ಬಳಿಯ ಅಂತರಗಂಗಾ ಅಂಗವಿಕಲರ ವಸತಿ ಶಾಲೆ ಆವರಣದಲ್ಲಿ ಆರ್.ಎಲ್. ಜಾಲಪ್ಪ ಅವರು ವಿಕಲಚೇತನರ ಅಭಿವೃದ್ಧಿಗಾಗಿ ನಿರ್ಮಿಸಿಕೊಟ್ಟಿರುವ ಕಟ್ಟಡದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿ, ಜಾಲಪ್ಪ ಸಂಸ್ಥೆಯ ಮೂಲಕ ಸಾಮಾಜಿಕ ಕಾರ್ಯ ಕೈಗೊಳ್ಳದಿದ್ದಲ್ಲಿ ಬಡ ರೋಗಿಗಳಿಗೆ ತೊಂದರೆ ಆಗುತ್ತಿತ್ತು ಎಂದು ಅಭಿಪ್ರಾಯಿಸಿದರು. ಜಾಲಪ್ಪ ಅವರು ಇನ್ನಷ್ಟು ವರ್ಷ ಬದುಕಿ ಜಿಲ್ಲೆಯ ಅಭಿವೃದ್ಧಿಗೆ ಸಹಕಾರ ನೀಡಬೇಕು, ಹಣ ಇದ್ದವರು ಬಡವರ ಸೇವೆ ಮಾಡುವುದು ಅಪರೂಪ, ಆದರೆ ಜಾಲಪ್ಪ ಆಸ್ಪತ್ರೆ ಹಾಗೂ ಅರಸು ಮೆಡಿಕಲ್ ಕಾಲೇಜು ನಡೆಸುವುದು ಕಷ್ಟವಾಗಿದ್ದರೂ ಸಮಾಜ ಸೇವೆಗೆ ಸಮರ್ಪಿಸಿಕೊಂಡಿದ್ದರು ಎಂದರು. ಅಂತರಗಂಗೆ ಅಂಗವಿಕಲರ ವಸತಿ ಶಾಲೆಗೆ ನೀರಿನ ವ್ಯವಸ್ಥೆ ಮಾಡಿಕೊಡುವುದಾಗಿ ಭರವಸೆ ನೀಡಿದರು.

ಆರ್.ಎಲ್.ಜಾಲಪ್ಪ ಟ್ರಸ್ಟ್ ಕಾರ್ಯದರ್ಶಿ ಜಿ.ಎಚ್. ನಾಗರಾಜ್, ಸಂಸ್ಥೆಯು ಕಳೆದ 40 ವರ್ಷಗಳಿಂದ ಅನೇಕ ಸೇವಾ ಕಾರ್ಯ ಮಾಡುತ್ತಾ ಬಂದಿದೆ ಎಂದರು. ಮಾಜಿ ಸಂಸದ ಆರ್.ಎಲ್.ಜಾಲಪ್ಪ, ಸಂಸದ ಎಸ್.ಮುನಿಸ್ವಾಮಿ, ಅಂತರಗಂಗೆ ವಿದ್ಯಾಸಂಸ್ಥೆ ಕಾರ್ಯದರ್ಶಿ ಕೆ.ಎಸ್.ಶಂಕರ್, ದೇವರಾಜ ಅರಸು ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಆ್ಯಂಡ್ ರಿಸರ್ಚ್ ಸೆಂಟರ್ ಟ್ರಸ್ಟಿ ಡಾ.ಎಸ್.ಕುಮಾರ್, ಜಾಲಪ್ಪ ಶಾಲೆ ಆಡಳಿತಾಧಿಕಾರಿ ಹನುಮಂತರಾಜು, ಡಾ.ಪಿ.ಎನ್.ಶ್ರೀರಾಮುಲು ಇತರರು ಇದ್ದರು.

ವಿಜಯವಾಣಿ ಚಿತ್ರ



ಕೋಲಾರದ ಅಂತರಗಂಗಾ ಅಂಗವಿಕಲರ ವಸತಿ ಶಾಲೆಯಲ್ಲಿ ನಿರ್ಮಿಸಿರುವ ಕಟ್ಟಡವನ್ನು ಮಾಜಿ ಸಂಸದ ಆರ್.ಎಲ್. ಜಾಲಪ್ಪ ಉದ್ಘಾಟಿಸಿದರು. ಸಂಸದ ಎಸ್.ಮುನಿಸ್ವಾಮಿ ಇತರರು ಇದ್ದರು.

# ಬಡ ಜನರಿಗೆ ವೈದ್ಯಕೀಯ ಸೇವೆ

ಪ್ರಜಾವಾಣಿ ವಾರ್ತೆ

ಕೋಲಾರ: 'ಕಾಂಗ್ರೆಸ್ ಮುಖಂಡ ಆರ್.ಎಲ್.ಜಾಲಪ್ಪ ಅವರು ದೂರದೃಷ್ಟಿಯಿಂದ ಜಿಲ್ಲೆಯ ಬಡ ಜನರಿಗೆ ವೈದ್ಯಕೀಯ ಸೇವೆ ನೀಡಲು ದೇವರಾಜ ಅರಸು ವೈದ್ಯಕೀಯ ಕಾಲೇಜು ಆರಂಭಿಸಿದರು' ಎಂದು ಶಾಸಕ ಕೆ.ಶ್ರೀನಿವಾಸಗೌಡ ಅಭಿಪ್ರಾಯಪಟ್ಟರು.

ನಗರದ ಅಂತರಗಂಗೆ ಅಂಗವಿಕಲರ ಆಶ್ರಮದಲ್ಲಿ ಶುಕ್ರವಾರ ನಡೆದ ನೂತನ ಕಟ್ಟಡ ಉದ್ಘಾಟನೆ ಸಮಾರಂಭದಲ್ಲಿ ಮಾತನಾಡಿ, 'ಜಾಲಪ್ಪ ಅವರು ಅಂತರಗಂಗೆ ಬುದ್ಧಿಮಾಂದ್ಯ ಮಕ್ಕಳ ವಸತಿ ಶಾಲೆ ಹಾಗೂ ಪುನರ್ವಸತಿ ಕೇಂದ್ರಕ್ಕೆ ನೂತನ ಕಟ್ಟಡ ನಿರ್ಮಿಸಿ ಕೊಟ್ಟಿರುವುದು ಅವರ ಹೃದಯದ ವೈಶಾಲ್ಯತೆ ತೋರುತ್ತದೆ' ಎಂದರು.

'ಸಂಸ್ಥೆಯು ಟ್ರಸ್ಟಿಗಳ ಸಹಕಾರದೊಂದಿಗೆ ಜಾಲಪ್ಪರ ಮಾರ್ಗದರ್ಶನದಲ್ಲಿ 40 ವರ್ಷಗಳಿಂದ ಅನೇಕ ಸೇವಾ ಕಾರ್ಯ ಮಾಡುತ್ತಾ ಬಂದಿದೆ. ಆರೋಗ್ಯ ಸೇವೆ, ಸಸಿ ನೆಡುವುದು, ವಿದ್ಯಾರ್ಥಿವೇತನ ಹಾಗೂ ಬಡ ರೋಗಿಗಳಿಗೆ ಉಚಿತವಾಗಿ ತಿಂಡಿ ಮತ್ತು ಊಟದ ವ್ಯವಸ್ಥೆ ಮಾಡಲಾಗಿದೆ' ಎಂದು ಆರ್.ಎಲ್.ಜಾಲಪ್ಪ ಟ್ರಸ್ಟ್ ಕಾರ್ಯದರ್ಶಿ ಜಿ.ಎಚ್.ನಾಗರಾಜ್ ಹೇಳಿದರು.



ಅಂತರಗಂಗೆ ಬುದ್ಧಿಮಾಂದ್ಯ ಮಕ್ಕಳ ವಸತಿ ಶಾಲೆ ಹಾಗೂ ಪುನರ್ವಸತಿ ಕೇಂದ್ರದ ನೂತನ ಕಟ್ಟಡವನ್ನು ಆರ್.ಎಲ್.ಜಾಲಪ್ಪ ಮತ್ತು ಸಂಸದ ಎಸ್.ಮುನಿಸ್ವಾಮಿ ಶುಕ್ರವಾರ ಉದ್ಘಾಟಿಸಿದರು

'ಸಂಸ್ಥೆಯಲ್ಲಿ 58 ಮಂದಿ ಬುದ್ಧಿಮಾಂದ್ಯ ಮಕ್ಕಳು ಹಾಗೂ 20 ಮಂದಿ ವಯೋವೃದ್ಧರು ಇದ್ದಾರೆ. ದಾನಿಗಳು ಇನ್ನೂ ಹೆಚ್ಚಿನ ನೆರವು ನೀಡಿದರೆ ಸೇವೆ ಸಲ್ಲಿಸಲು ಸದಾ ಸಿದ್ಧವಿದ್ದೇವೆ' ಎಂದು ಅಂತರಗಂಗೆ ವಿದ್ಯಾ ಸಂಸ್ಥೆ ಕಾರ್ಯದರ್ಶಿ ಕೆ.ಎಸ್.ಶಂಕರ್ ತಿಳಿಸಿದರು.

**ಉಚಿತ ಚಿಕಿತ್ಸೆ:** 'ಅಂತರಗಂಗೆ ಸಂಸ್ಥೆಯ ಎಲ್ಲಾ ಮಕ್ಕಳಿಗೆ, ವಯೋವೃದ್ಧರಿಗೆ ಮತ್ತು ಸಿಬ್ಬಂದಿಗೆ ಜಾಲಪ್ಪ ಆಸ್ಪತ್ರೆಯಲ್ಲಿ ಉಚಿತವಾಗಿ ಚಿಕಿತ್ಸೆ ನೀಡುತ್ತೇವೆ. ಸಂಸ್ಥೆಗೆ ಒಂದು ವಾರದಲ್ಲಿ ಹಾಸಿಗೆ ಪೂರೈಸುತ್ತೇವೆ' ಎಂದು ದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆ ಟ್ರಸ್ಟಿ ಡಾ.ಎಸ್.ಕುಮಾರ್ ಹೇಳಿದರು.

ಆರ್.ಎಲ್.ಜಾಲಪ್ಪ ಹಾಗೂ ಸಂಸದ ಎಸ್.ಮುನಿಸ್ವಾಮಿ ನೂತನ ಕಟ್ಟಡ ಉದ್ಘಾಟಿಸಿದರು. ದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆ ನಿರ್ದೇಶಕ ಜೆ.ರಾಜೇಂದ್ರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕಿ ಎಂ.ಜಿ.ಪಾಲಿ ಪಾಲ್ಗೊಂಡರು.

www.vijaykarnataka.com ವಿಜಯ ಕರ್ನಾಟಕ

# ಮೆಡಿಕಲ್ ಕಾಲೇಜು ಆರಂಭ ಆರ್‌ಎಲ್‌ಜೆ ದೂರದೃಷ್ಟಿ



**ವಿಕ ಸುದ್ದಿಲೋಕ** ಕೋಲಾರ

ಮಾಜಿ ಸಂಸದ ಆರ್.ಎಲ್. ಜಾಲಪ್ಪನವರ ದೂರದೃಷ್ಟಿಯಿಂದಾಗಿ ಜನರ ಆರೋಗ್ಯ ಕಾಪಾಡಲು ದೇವರಾಜ ಅರಸು ಮೆಡಿಕಲ್ ಕಾಲೇಜು ಪ್ರಾರಂಭಿಸಿದರು ಎಂದು ಶಾಸಕ ಕೆ.ಶ್ರೀನಿವಾಸಗೌಡ ಹೇಳಿದರು.

ನಗರ ಹೊರವಲಯದಲ್ಲಿ ಅಂತರ ಗಂಗಾ ವಿಶೇಷಚೇತನರ ವಿದ್ಯಾಸಂಸ್ಥೆ ಆವರಣದಲ್ಲಿ ಸುಸಜ್ಜಿತ ನೂತನ ಕಟ್ಟಡ ಉದ್ಘಾಟನಾ ಸಮಾರಂಭದ ವೇದಿಕೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಅದೇ ರೀತಿ ಮಾನವೀಯತೆ ಮೆರೆದು ನಗರದ ಅಂತರ ಗಂಗೆ ಬೆಟ್ಟದ ಬುಡದಲ್ಲಿರುವ ಅಂತರಗಂಗಾ ಬುದ್ಧಿಮಾಂದ್ಯ ಮಕ್ಕಳ ವಸತಿ ಶಾಲೆ ಹಾಗೂ ಪುನರ್ವಸತಿ ಕೇಂದ್ರಕ್ಕೆ ಸುಸಜ್ಜಿತ ನೂತನ ಕಟ್ಟಡ ನಿರ್ಮಿಸಿಕೊಟ್ಟಿರುವ ಜಾಲಪ್ಪನವರಿಗೆ ಇನ್ನೂ ಹೆಚ್ಚಿನ ಆಯುಷ್ಯ,ಆರೋಗ್ಯ ದೇವರು ನೀಡಲಿ ಎಂದು ಆಶಿಸಿದರು.

ಇದೇ ಸಂದರ್ಭದಲ್ಲಿ ಸಂಸ್ಥೆಗೆ ನೀರಿನ ಅವಶ್ಯಕತೆ ಇರುವ ಬಗ್ಗೆ ಶಾಸಕರ ಗಮನಕ್ಕೆ ತಂದಾಗ ಸ್ಪಂದಿಸಿದ ಶಾಸಕರು ಅಗತ್ಯವಿರುವ ನೀರಿನ ವ್ಯವಸ್ಥೆ ಮಾಡಲು ಈ ದಿನವೇ ನಗರಸಭೆ ಅಧಿಕಾರಿಗಳೊಂದಿಗೆ ಚರ್ಚಿಸುವ ಭರವಸೆ ನೀಡಿದರು.

ಆರ್‌ಎಲ್ ಜಾಲಪ್ಪ ಟ್ರಸ್ಟ್‌ನ ಕಾರ್ಯದರ್ಶಿ ಜಿ.ಎಚ್.ನಾಗರಾಜ್ ಮಾತನಾಡಿ, ಸಂಸ್ಥೆಯು ಎಲ್ಲ ಟ್ರಸ್ಟಿಗಳ ಸಹಕಾರದೊಂದಿಗೆ ಜಾಲಪ್ಪನವರ ಮಾರ್ಗದರ್ಶನದಲ್ಲಿ 40 ವರ್ಷದಿಂದ ಅನೇಕ ಸೇವಾ ಕಾರ್ಯಗಳನ್ನು ಮಾಡುತ್ತಾ ಬಂದಿದೆ.

ಆರೋಗ್ಯ ಕಲ್ಪಿಸುವಲ್ಲಿ ಪರಿಸರ ಕಾಪಾಡಲು ಗಿಡನೆಡುವ ಕಾರ್ಯಕ್ರಮ ರೂಪಿಸಲು, ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುವುದು ಹಾಗೂ ಜಾಲಪ್ಪ ಆಸ್ಪತ್ರೆಗೆ ಬರುವ ರೋಗಿಗಳಿಗೆ ಅನಾನುಕೂಲವಾಗಬಾರದೆಂಬ ದೃಷ್ಟಿಯಿಂದ ಉಚಿತ ತಿಂಡಿ, ಎರಡೂ ಹೊತ್ತಿನ ಊಟದ ವ್ಯವಸ್ಥೆಯನ್ನು ಜಾಲಪ್ಪ ಅವರು ಮಾಡುತ್ತಿರುವುದಾಗಿ ವಿವರಿಸಿದರು.

**ವಿಶೇಷಚೇತನರ ವಿದ್ಯಾಸಂಸ್ಥೆ ಆವರಣದಲ್ಲಿ ಸುಸಜ್ಜಿತ ನೂತನ ಕಟ್ಟಡ ಉದ್ಘಾಟನಾ ಸಮಾರಂಭದ ವೇದಿಕೆ ಕಾರ್ಯಕ್ರಮಕ್ಕೆ ಚಾಲನೆ**

ಅಂತರಗಂಗೆ ವಿದ್ಯಾಸಂಸ್ಥೆ ಕಾರ್ಯದರ್ಶಿ ಕೆ.ಎಸ್.ಶಂಕರ್ ಪ್ರಾಸ್ತಾವಿಕವಾಗಿ ಮಾತನಾಡಿ, ಸಂಸ್ಥೆಯಲ್ಲಿ 58 ಮಂದಿ ಬುದ್ಧಿಮಾಂದ್ಯ ಮಕ್ಕಳು ಹಾಗೂ 20 ಮಂದಿ ವೃದ್ಧರಿದ್ದಾರೆ. ದಾನಿಗಳು ಇನ್ನೂ ಹೆಚ್ಚಿನ ಸಹಕಾರ ನೀಡಿದರೆ ಸೇವೆ ಸಲ್ಲಿಸಲು ತಾವು ಸದಾ ಸಿದ್ಧವಿರುವುದಾಗಿ ಅವರು ತಿಳಿಸಿದರು.

ದೇವರಾಜ ಅರಸು ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಅಂಡ್ ರೀಸರ್ಚ್ ಸೆಂಟರ್‌ನ ಟ್ರಸ್ಟಿ ಡಾ.ಎಸ್.ಕುಮಾರ್ ಮಾತನಾಡಿ, ಅಂತರಗಂಗಾ ಸಂಸ್ಥೆಯ ಎಲ್ಲ ಮಕ್ಕಳಿಗೆ ಹಾಗೂ ವೃದ್ಧರಿಗೆ ಮತ್ತು ಸಿಬ್ಬಂದಿಗೆ ಜಾಲಪ್ಪ ಆಸ್ಪತ್ರೆಯಲ್ಲಿ ಉಚಿತವಾಗಿ ಚಿಕಿತ್ಸೆ ನೀಡುವುದಾಗಿ ತಿಳಿಸಿ, ಅಗತ್ಯವಿರುವ ಹಾಸಿಗೆಗಳನ್ನು ವಾರದಲ್ಲಿ ಪೂರೈಸುವುದಾಗಿ ಹೇಳಿದರು.ಬೆಳಗ್ಗೆ ನಡೆದ ಕಾರ್ಯಕ್ರಮದಲ್ಲಿ ಸಂಸದ ಎಸ್. ಮುನಿಸ್ವಾಮಿ, ಮಾಜಿ ಸಂಸದ ಆರ್.ಎಲ್.ಜಾಲಪ್ಪ ನೆನಪಿಗಾಗಿ ಗಿಡನೆಡುವ ಮೂಲಕ ನೂತನ ಕಟ್ಟಡ ಉದ್ಘಾಟನೆ ನೆರವೇರಿಸಿದರು.

ದೇವರಾಜ್ ಅರಸು ವೈದ್ಯಕೀಯ ವಿಶ್ವವಿದ್ಯಾಲಯದ ಆರ್.ರಾಜೇಂದ್ರ, ಕೆ.ಜಿ.ಹನುಮಂತರಾಜು, ಎನ್.ಉದಯ್, ಎನ್.ಅರವಿಂದ ಹರಿಶ್ಚಂದ್ರ, ಮೃಣಾಲಿನಿ, ಪ್ರದೀಪ್‌ಕುಮಾರ್ ಇತರರಿದ್ದರು.

ಸೆ.30ರೊಳಗೆ ಅಂತಿಮ ಸೆಮಿಸ್ಟರ್ ಪರೀಕ್ಷೆ ಕಡ್ಡಾಯ | ರಾಜ್ಯ, ವಿವಿಗಳಿಗೆ ಸುಪ್ರೀಂ ಸೂಚನೆ

# ಪರೀಕ್ಷೆ ಇಲ್ಲದೆ ಪದವಿ ಇಲ್ಲ

**ಹೊಸದಿಲ್ಲಿ:** ಪದವಿ ಕೋರ್ಸ್‌ಗಳ ಕೊನೆ ವರ್ಷದ ಅಂತಿಮ ಸೆಮಿಸ್ಟರ್ ಪರೀಕ್ಷೆಯನ್ನು ನಡೆಸದೇ ವಿದ್ಯಾರ್ಥಿಗಳನ್ನು ತೇರ್ಗಡೆ ಮಾಡುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ರಾಜ್ಯಗಳು ಹಾಗೂ ವಿಶ್ವವಿದ್ಯಾಲಯಗಳಿಗೆ ಸೂಚಿಸಿದೆ.

ಅಗತ್ಯ ಸುರಕ್ಷಾ ಕ್ರಮಗಳೊಂದಿಗೆ ಸೆಪ್ಟೆಂಬರ್ 30ರೊಳಗೆ ಪದವಿ ತರಗತಿಗಳ ಕೊನೆ ವರ್ಷದ ಅಂತಿಮ ಸೆಮಿಸ್ಟರ್ ಪರೀಕ್ಷೆ ನಡೆಸುವಂತೆ ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ನೀಡಿರುವ ನಿರ್ದೇಶನಗಳನ್ನು ಎತ್ತಿಹಿಡಿದಿರುವ ಸುಪ್ರೀಂ ಕೋರ್ಟ್, ಯಾವುದೇ ಕಾರಣಕ್ಕೂ ರಾಜ್ಯ ಹಾಗೂ ವಿವಿಗಳು ಅಂತಿಮ ಪದವಿ ಪರೀಕ್ಷೆ ನಡೆಸದೇ ವಿದ್ಯಾರ್ಥಿಗಳನ್ನು ಪಾಸು ಮಾಡುವಂತಿಲ್ಲ ಎಂದು ಸ್ಪಷ್ಟವಾಗಿ ಹೇಳಿದೆ.

"ಕೊರೊನಾ ನೆಪವನ್ನೇ ಮುಂದಿಟ್ಟುಕೊಂಡು ಪದವಿ ಕೋರ್ಸ್‌ಗಳ ಅಂತಿಮ ಪರೀಕ್ಷೆಗಳನ್ನು ನಡೆಸಲಾಗದು ಎಂಬುದು ಒಪ್ಪಿತವಲ್ಲ. ತಜ್ಞರ ಜತೆ ಚರ್ಚಿಸಿ ಅವರ ಶಿಫಾರಸಿನ ಮೇರೆಗೆ ಸೆಪ್ಟೆಂಬರ್ ಅಂತ್ಯದೊಳಗೆ ಪರೀಕ್ಷೆ ನಡೆಸಬೇಕೆಂಬ ತೀರ್ಮಾನ ಕೈಗೊಳ್ಳಲಾಗಿದೆ," ಎಂದು ಯುಜಿಸಿ ಜುಲೈ 6ರಂದು ಹೊರಡಿಸಿದ್ದ ಮಾರ್ಗದರ್ಶಿ ನಿಯಮಗಳಲ್ಲಿ ಸ್ಪಷ್ಟಪಡಿಸಿತ್ತು. ಆನ್‌ಲೈನ್, ಆಫ್‌ಲೈನ್ ಅಥವಾ ಎರಡೂ ವಿಧಾನಗಳ ಮೂಲಕ ಪರೀಕ್ಷೆ ನಡೆಸಬಹುದು. ಮೌಲ್ಯಮಾಪನವು ವಿದ್ಯಾರ್ಥಿ ಜೀವನದ ಪ್ರಮುಖ ಘಟ್ಟವಾಗಿರುವುದರಿಂದ ಕೊನೆ ವರ್ಷದ ಅಂತಿಮ ಸೆಮಿಸ್ಟರ್ ಪರೀಕ್ಷೆ ನಡೆಸುವುದು ಅನಿವಾರ್ಯ ಎಂದು ಯುಜಿಸಿ ಹೇಳಿತ್ತು.



## ವಿದ್ಯಾರ್ಥಿಗಳ ಜೀವದ ಜತೆ ಚೆಲ್ಲಾಟವಾಡಬೇಡಿ

ನೀಟ್ ಹಾಗೂ ಜೆಇಇ ಮೇನ್ಸ್ ನಡೆಸುವ ವಿಚಾರದಲ್ಲಿ ವಿದ್ಯಾರ್ಥಿಗಳ ಜೀವದ ಜತೆ ಚೆಲ್ಲಾಟವಾಡಬೇಡಿ. ವಿದ್ಯಾರ್ಥಿಗಳ ಹಾಗೂ ಪೋಷಕರ ಅಹವಾಲಿಗೆ ಧ್ವನಿಯಾಗಿ ಎಂದು ಕಾಂಗ್ರೆಸ್ ಸರಕಾರಕ್ಕೆ ತಿಳಿಹೇಳಿದೆ. ಸೆಪ್ಟೆಂಬರ್‌ನಲ್ಲಿ ಪರೀಕ್ಷೆ ನಡೆಸಲು ಪ್ರತಿಪಕ್ಷಗಳು ವಿರೋಧ ವ್ಯಕ್ತಪಡಿಸಿವೆ. 'ಸ್ಪೀಕ್ ಅಪ್ ಫಾರ್ ಸ್ಟೂಡೆಂಟ್ ಸೇಫ್ಟಿ' ಹ್ಯಾಷ್‌ಟ್ಯಾಗ್ ನಡಿ ಸಾಮಾಜಿಕ ಜಾಲತಾಣಗಳಲ್ಲಿ ದಿನವಿಡೀ ಸರಕಾರದ ವಿರುದ್ಧ ಕಾಂಗ್ರೆಸ್ ಅಭಿಯಾನ ನಡೆಸಿದೆ. ದಿಲ್ಲಿ ಸೇರಿದಂತೆ ಹಲವು ಕಡೆ ಪರೀಕ್ಷೆ ಮುಂದೂಡಿಕೆಗೆ ಆಗ್ರಹಿಸಿ ಕಾಂಗ್ರೆಸ್ ಕಾರ್ಯಕರ್ತರಿಂದ ಪ್ರತಿಭಟನೆಗಳೂ ನಡೆದಿವೆ.

ಯುಜಿಸಿಯ ಈ ನಿರ್ದೇಶನಗಳನ್ನು ಪ್ರಶ್ನಿಸಿ ಶಿವಸೇನೆಯ ಯುವ ಘಟಕ 'ಯುವ ಸೇನೆ' ಸುಪ್ರೀಂ ಕೋರ್ಟ್ ಮೊರೆ ಹೋಗಿತ್ತು. ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅಶೋಕ್ ಭೂಷಣ್ ನೇತೃತ್ವದ ಪೀಠವು, "ಯಾವುದೇ ರಾಜ್ಯ ಅಥವಾ ವಿಶ್ವವಿದ್ಯಾಲಯವು ಪದವಿ ಕೊನೆ ವರ್ಷದ ಅಂತಿಮ ಸೆಮಿಸ್ಟರ್ ಪರೀಕ್ಷೆಗಳನ್ನು ನಡೆಸದೇ ವಿದ್ಯಾರ್ಥಿಗಳನ್ನು ತೇರ್ಗಡೆ ಮಾಡಲು ಸಾಧ್ಯವಿಲ್ಲ. ಹಾಗೆ ಮಾಡಿದರೆ ಶೈಕ್ಷಣಿಕ ಗುಣಮಟ್ಟಕ್ಕೆ ಹೊಡೆತ ಬೀಳುತ್ತದೆ. ಕೊರೊನಾ ಹಾವಳಿಯಿಂದ ಸೆಪ್ಟೆಂಬರ್‌ನೊಳಗೆ ಪರೀಕ್ಷೆ ನಡೆಸಲು ಸಾಧ್ಯವಾಗದಿದ್ದರೆ ಹೊಸ ದಿನಾಂಕಗಳಿಗೆ ಯುಜಿಸಿ ಮೊರೆ ಹೋಗಬೇಕು," ಎಂದು ರಾಜ್ಯ ಹಾಗೂ ವಿವಿಗಳಿಗೆ ಸೂಚಿಸಿತು.

ಈ ಹಿಂದೆ ಅಂತಿಮ ವರ್ಷದ ಪರೀಕ್ಷೆಗಳನ್ನು ರದ್ದುಗೊಳಿಸುವ ಮಹಾರಾಷ್ಟ್ರ ಮತ್ತು ದಿಲ್ಲಿಯ ನಿರ್ಧಾರಗಳಿಗೆ ಯುಜಿಸಿ, "ಇಂತಹ ನಡೆಗಳಿಂದ ಉನ್ನತ ಶಿಕ್ಷಣದ ಮಾನದಂಡಗಳ ಮೇಲೆ ನೇರವಾಗಿ ಪರಿಣಾಮ ಬೀರುತ್ತದೆ," ಎಂದು ಹೇಳಿತ್ತು.

## ನೀಟ್: ಪ್ರತಿಪಕ್ಷಗಳಿಂದ ಮರು ಪರಿಶೀಲನಾ ಅರ್ಜಿ

**ಹೊಸದಿಲ್ಲಿ:** ಕೋವಿಡ್-19 ಪಿಡುಗಿನ ಸಂದರ್ಭದಲ್ಲಿ ನೀಟ್ ಹಾಗೂ ಜೆಇಇ-ಮೇನ್ಸ್ ನಡೆಸಲು ಕೇಂದ್ರ ಸರಕಾರಕ್ಕೆ ಅನುಮತಿ ನೀಡಿದ ಸುಪ್ರೀಂ ಕೋರ್ಟ್ ತೀರ್ಪನ್ನು ಮರುಪರಿಶೀಲಿಸಬೇಕೆಂದು ಕೋರಿ ಎನ್‌ಡಿಎಯೇತರ ಪಕ್ಷಗಳ ಅಧಿಕಾರವಿರುವ ಆರು ರಾಜ್ಯಗಳ ಸಚಿವರು ಸುಪ್ರೀಂಗೆ ಮೇಲ್ಮನವಿ ಸಲ್ಲಿಸಿದ್ದಾರೆ. ಪಶ್ಚಿಮ ಬಂಗಾಳದ ಮೋಲೆ ಘಟಕ್, ಜಾರ್ಖಂಡ್‌ನ ರಾಮೇಶ್ವರ್ ಒರನ್, ರಾಜಸ್ಥಾನದ ರಘು ಶರ್ಮಾ, ಛತ್ತೀಸ್‌ಗಢದ ಅಮರಜೀತ್ ಭಗತ್, ಪಂಜಾಬ್‌ನ ಬಿ.ಎಸ್.ಸಿಧು, ಮಹಾರಾಷ್ಟ್ರದ ಉದಯ್ ರವೀಂದ್ರ ಸಾವಂತ್ ಅವರ ಪರ ವಕೀಲ ಸುನೀಲ್ ಫರ್ನಾಂಡಿಸ್ ಮೇಲ್ಮನವಿ ಸಲ್ಲಿಸಿದರು.



ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ ನೀಡಿರುವ ಮಾಹಿತಿಯಂತೆ 9.53 ಲಕ್ಷ ವಿದ್ಯಾರ್ಥಿಗಳು ಜೆಇಇ ಮೇನ್ಸ್‌ಗೆ ನೋಂದಾಯಿತರಾಗಿದ್ದಾರೆ. 660ಕ್ಕೂ ಹೆಚ್ಚು ಪರೀಕ್ಷಾ ಕೇಂದ್ರಗಳಲ್ಲಿ ತಲಾ 1,443 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಅದೇ ರೀತಿ 15.97 ಲಕ್ಷ ವಿದ್ಯಾರ್ಥಿಗಳು ನೀಟ್‌ಗೆ ನೋಂದಾಯಿಸಿಕೊಂಡಿದ್ದು 3,843ಕ್ಕೂ ಹೆಚ್ಚು ಪರೀಕ್ಷಾ ಕೇಂದ್ರಗಳಲ್ಲಿ ತಲಾ 415 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಜನ ಸೇರುವುದರಿಂದ ಕೊರೊನಾ ಹಾವಳಿ ಮಧ್ಯೆ ಪರಸ್ಪರ ಅಂತರ ಕಾಯ್ದುಕೊಳ್ಳುವುದು ಸೇರಿದಂತೆ ಅಗತ್ಯ ಸುರಕ್ಷಾ ಕ್ರಮಗಳ ಉಲ್ಲಂಘನೆಯಾಗಲಿದೆ. ಇದರಿಂದ ವಿದ್ಯಾರ್ಥಿಗಳ ಜೀವದ ಜತೆ ಚೆಲ್ಲಾಟವಾಡಿದಂತಾಗುತ್ತದೆ. ಹಾಗಾಗಿ ಪರೀಕ್ಷೆ ಮುಂದೂಡಬೇಕೆಂದು ಅರ್ಜಿಯಲ್ಲಿ ಮನವಿ ಮಾಡಿಕೊಳ್ಳಲಾಗಿದೆ.

ಪರೀಕ್ಷೆ ಮುಂದೂಡಲು ಕೋರಿ 11 ರಾಜ್ಯಗಳ 11 ವಿದ್ಯಾರ್ಥಿಗಳು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ವಜಾಗೊಳಿಸಿ, ಪರೀಕ್ಷೆಗೆ ಅವಕಾಶ ನೀಡದಿದ್ದರೆ ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯ ಒಂದು ವರ್ಷದ ಮಟ್ಟಿಗೆ ಹಾಳಾಗುತ್ತದೆ ಎಂದು ಹೇಳಿತ್ತು.

ಯುಜಿಸಿ ನಿರ್ದೇಶನಗಳನ್ನು ಎತ್ತಿ ಹಿಡಿದ ಸುಪ್ರೀಂ ಕೋರ್ಟ್ ತೀರ್ಪು ಸ್ವಾಗತಾರ್ಹ. ಶಿಕ್ಷಣದ ವಿಚಾರದಲ್ಲಿ ರಾಜಕಾರಣ ಬದಿಗಿಟ್ಟು ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ನಾವೆಲ್ಲರೂ ಆಲೋಚಿಸಬೇಕಾಗಿದೆ.

**-ರಮೇಶ್ ಪೋಖ್ರಿಯಾಲ್ ನಿಶಾಂಕ್** ಕೇಂದ್ರ ಸಚಿವ

ಪರೀಕ್ಷೆಯ ವಿಚಾರಕ್ಕೆ ಸಂಬಂಧಿಸಿದಂತೆ ಸರಕಾರವು ಎಲ್ಲರ ಅಭಿಪ್ರಾಯ ಆಲಿಸಿ, ಒಮ್ಮತದ ನಿರ್ಧಾರಕ್ಕೆ ಬರಬೇಕು. ವಿದ್ಯಾರ್ಥಿಗಳಾದ ನೀವು ಈ ದೇಶದ ಭವಿಷ್ಯ. ದೇಶವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುವ ಜವಾಬ್ದಾರಿ ನಿಮ್ಮ ಮೇಲಿದ್ದು, ನಿಮ್ಮ ಬದುಕಿನ ಕಾಳಜಿ ನಮ್ಮ ಆದ್ಯತೆಯಾಗಿದೆ.

**-ರಾಹುಲ್ ಗಾಂಧಿ** ಕಾಂಗ್ರೆಸ್ ಸಂಸದ

ಕೊರೊನಾ ಹಾವಳಿಯ ಇಂದಿನ ಸ್ಥಿತಿಯಲ್ಲಿ ವಿದ್ಯಾರ್ಥಿಗಳು ಕಷ್ಟದ ಸನ್ನಿವೇಶ ಎದುರಿಸುತ್ತಿದ್ದು, ಅವರ ಹಾಗೂ ಅವರ ಕುಟುಂಬದ ಸುರಕ್ಷೆ ಪರ ಕಾಂಗ್ರೆಸ್ ಸದಾ ನಿಲ್ಲುತ್ತದೆ. ವಿದ್ಯಾರ್ಥಿಗಳ ಜೀವದ ಜತೆ ಚೆಲ್ಲಾಟವಾಡದೇ ಸರಕಾರ ನೀಟ್, ಜೆಇಇ ಪರೀಕ್ಷೆ ಮುಂದೂಡುವ ಮೂಲಕ ಅವರ ಆತಂಕವನ್ನು ದೂರ ಮಾಡಬೇಕು.

**- ಸೋನಿಯಾ ಗಾಂಧಿ** ಕಾಂಗ್ರೆಸ್ ಅಧ್ಯಕ್ಷೆ

ಅಂತರಗಂಗಾ ಬುದ್ಧಿಮಾಂದ್ಯ ಮಕ್ಕಳ ವಸತಿಶಾಲೆಗೆ ಅರಸು ಟ್ರಸ್ಟ್‌ನಿಂದ ನೂತನ ಶಾಲಾ ಕಟ್ಟಡ

# ಜಾಲಪ್ಪನವರ ದೂರದೃಷ್ಟಿಯಿಂದ ವೈದ್ಯಕೀಯ ಕಾಲೇಜ್:ಕೆ.ಎಸ್.ಬಿ






ಕೋಲಾರ ಆ ೨೮

ಮಾಜಿ ಕೇಂದ್ರ ಸಚಿವ ಆರ್.ಎಲ್. ಜಾಲಪ್ಪನವರ ದೂರದೃಷ್ಟಿಯಿಂದಾಗಿ ಜನರ ಆರೋಗ್ಯ ಕಾಪಾಡಲು ದೇವರಾಜ ಅರಸು ಮೆಡಿಕಲ್ ಕಾಲೇಜು ಪ್ರಾರಂಭವಾಯಿತೆಂದು ಶಾಸಕ ಕೆ.ಶ್ರೀನಿವಾಸಗೌಡ ಅಭಿಪ್ರಾಯಪಟ್ಟರು.

ನಗರ ಹೊರವಲಯದ ಅಂತರಗಂಗೆ ರಸ್ತೆಯಲ್ಲಿ ಅಂತರಗಂಗಾ ಬುದ್ಧಿಮಾಂದ್ಯ ಮಕ್ಕಳ ವಸತಿ ಶಾಲೆಯ ಆವರಣದಲ್ಲಿ ದೇವರಾಜ ಅರಸು ವಿದ್ಯಾ ಟ್ರಸ್ಟ್‌ನಿಂದ ಕಟ್ಟಿಸಿಕೊಟ್ಟಿರುವ ಸುಸಜ್ಜಿತ ನೂತನ ಕಟ್ಟಡ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡುತ್ತಿದ್ದರು.

ಮಾನವೀಯತೆ ಮೆರೆದು ಅಂತರಗಂಗಾ ಬುದ್ಧಿಮಾಂದ್ಯ ಮಕ್ಕಳ ವಸತಿ ಶಾಲೆ ಹಾಗೂ ಪುನರ್ವಸತಿ ಕೇಂದ್ರಕ್ಕೆ ಸುಸಜ್ಜಿತವಾದ ನೂತನ ಕಟ್ಟಡ ನಿರ್ಮಿಸಿ ಕೊಟ್ಟಿರುವುದು ಅವರ ಹೃದಯ ವೈಶಾಲ್ಯತೆಯನ್ನು ತೋರುತ್ತದೆ. ಹೆಚ್ಚಿನ ಸೇವೆ ಸಲ್ಲಿಸಲು ಜಾಲಪ್ಪನವರಿಗೆ ಇನ್ನೂ ಹೆಚ್ಚಿನ ಆಯುಷ್ಯ, ಆರೋಗ್ಯ ದೇವರು ನೀಡಲಿ ಎಂದು ಆಶಿಸಿದರು.

ಸಂಸ್ಥೆಗೆ ನೀರಿನ ಅವಶ್ಯಕತೆ ಇರುವ ಬಗ್ಗೆ ಶಾಸಕರ ಗಮನಕ್ಕೆ ತಂದಾಗ ಸ್ಪಂದಿಸಿದ ಶ್ರೀನಿವಾಸಗೌಡರು ಅಗತ್ಯವಿರುವ ನೀರಿನ ವ್ಯವಸ್ಥೆ ಮಾಡಲು ಈ ದಿನವೇ ನಗರಸಭೆ ಅಧಿಕಾರಿಗಳೊಂದಿಗೆ ಚರ್ಚಿಸುವ ಭರವಸೆಯನ್ನು ನೀಡಿದರು.

ದೇವರಾಜ ಅರಸು ಶಿಕ್ಷಣ ಟ್ರಸ್ಟ್‌ನ ಕಾರ್ಯದರ್ಶಿ ಜಿ.ಎಚ್. ನಾಗರಾಜ್ ಮಾತನಾಡಿ ಸಂಸ್ಥೆಯ ಎಲ್ಲ ಟ್ರಸ್ಟಿಗಳ ಸಹಕಾರದೊಂದಿಗೆ ಜಾಲಪ್ಪನವರ ಮಾರ್ಗದರ್ಶನದಲ್ಲಿ ಕಳೆದ ೪೦ ವರ್ಷಗಳಿಂದ ಅನೇಕ ಸೇವಾ ಕಾರ್ಯಗಳನ್ನು ಮಾಡುತ್ತ ಬಂದಿದೆ. ಆರೋಗ್ಯ ಕಲ್ಪಿಸುವಲ್ಲಿ, ಪರಿಸರ ಕಾಪಾಡಲು ಗಿಡ ನೆಡುವ ಕಾರ್ಯಕ್ರಮ ರೂಪಿಸಲು, ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಿಕೆ, ಜಾಲಪ್ಪ ಆಸ್ಪತ್ರೆಗೆ ಬರುವ ರೋಗಿಗಳಿಗೆ ಅನಾನುಕೂಲವಾಗಬಾರದೆಂಬ ದೃಷ್ಟಿಯಿಂದ ಉಚಿತ ತಿಂಡಿ, ಎರಡೂ ಹೊತ್ತಿನ ಊಟದ ವ್ಯವಸ್ಥೆಯನ್ನು ಜಾಲಪ್ಪ ಮಾಡುತ್ತಿರುವುದಾಗಿ ವಿವರಿಸಿದರು.

ಅಂತರಗಂಗೆ ವಿದ್ಯಾಸಂಸ್ಥೆ ಕಾರ್ಯದರ್ಶಿ ಕೆ.ಎಸ್.ಶಂಕರ್ ಪ್ರಾಸ್ತಾವಿಕವಾಗಿ ಮಾತನಾಡಿ, ಸಂಸ್ಥೆಯಲ್ಲಿ ೫೮ ಮಂದಿ ಬುದ್ಧಿಮಾಂದ್ಯ ಮಕ್ಕಳು ಹಾಗೂ ೨೦ ವಯೋವೃದ್ಧರು ವಾಸಮಾಡುತ್ತಿದ್ದಾರೆ. ದಾನಿಗಳು ಇನ್ನೂ ಹೆಚ್ಚಿನ ಸಹಕಾರ ನೀಡಿದರೆ ಸೇವೆ ಸಲ್ಲಿಸಲು ತಾವು ಸದಾ ಸಿದ್ಧವಿರುವುದಾಗಿ ತಿಳಿಸಿದರು.

ದೇವರಾಜ ಅರಸು ಉನ್ನತ ಶಿಕ್ಷಣ ಮತ್ತು ಸಂಶೋಧನಾ ಕೇಂದ್ರ ಅಕಾಡೆಮಿಯ ಟ್ರಸ್ಟಿ ಡಾ॥ ಎಸ್. ಕುಮಾರ್ ಮಾತನಾಡಿ, ಅಂತರಗಂಗಾ ಸಂಸ್ಥೆಯ ಎಲ್ಲಾ ಮಕ್ಕಳು, ವೃದ್ಧರು ಮತ್ತು ಸಿಬ್ಬಂದಿ ವರ್ಗದವರಿಗೆ ಜಾಲಪ್ಪ ಆಸ್ಪತ್ರೆಯಲ್ಲಿ ಉಚಿತವಾಗಿ ಚಿಕಿತ್ಸೆ ನೀಡುವುದಾಗಿ ತಿಳಿಸಿ, ಅಗತ್ಯವಿರುವ ಹಾಸಿಗೆಗಳನ್ನು ಇನ್ನು ಒಂದು ವಾರದಲ್ಲಿ ಪೂರೈಸುವುದಾಗಿ ಹೇಳಿದರು.

ಇದಕ್ಕೂ ಮುನ್ನ ಸಂಸದ ಎಸ್.ಮುನಿಸ್ವಾಮಿ, ಮಾಜಿ ಸಂಸದ ಆರ್.ಎಲ್.ಜಾಲಪ್ಪ ಅವರು ಗಿಡನೆಡುವ ಮೂಲಕ ನೂತನ ಕಟ್ಟಡದ ಉದ್ಘಾಟನೆ ನೆರವೇರಿಸಿದರು.

ದೇವರಾಜ ಅರಸು ವೈದ್ಯಕೀಯ ವಿಶ್ವ ವಿದ್ಯಾಲಯದ ಟ್ರಸ್ಟಿ ಜೆ. ರಾಜೇಂದ್ರ, ಕೆ.ಜಿ.ಹನುಮಂತರಾವ್,ಎನ್.ಉದಯ್, ಎನ್. ಅರವಿಂದ ಹರಿಶ್ಚಂದ್ರ, ಮೃಣಾಲಿನಿ, ಪ್ರದೀಪ್ ಕುಮಾರ್, ಕೆ.ಎನ್.ವಿ.ಪ್ರಸಾದ್, ಪಿ.ಎನ್. ಶ್ರೀರಾಮುಲು, ಮಹಿಳಾ ಮತ್ತು ಮಕ್ಕಳ ಕಲ್ಯಾಣಇಲಾಖೆಯ ಉಪನಿರ್ದೇಶಕಿ ಎಂಜಿ ಪಾಲಿ, ದಿವ್ಯಾಂಗರ ಕಲ್ಯಾಣ ಇಲಾಖೆಯ ಮುನಿರಾಜು ಉಪಸ್ಥಿತರಿದ್ದರು.

# States can apply to UGC for extension of exam deadline: SC


## Their powers under DM Act do not extend to promotions without tests, it says

KRISHNADAS RAJAGOPAL
NEW DELHI

States are empowered under the Disaster Management Act to override the University Grants Commission (UGC) exam guidelines in order to protect human lives amid the COVID-19 pandemic, the Supreme Court held on Friday.

A three-judge Bench, led by Justice Ashok Bhushan, upheld the power of a State and its disaster management authority to countermand the revised UGC guidelines of July 6 to conduct the final year and terminal semester examinations by September 30.

> When the State Disaster Management Authority and State government take a decision that for mitigation or prevention of disaster it is not possible to hold physical examination in the State, the decision is within the four corners of Disaster Management Act, 2005
>
> SUPREME COURT BENCH



**'Saving lives paramount'**

"In case of a disaster, the priority of all authorities under the Disaster Management Act, 2005 is to immediately combat the disaster and contain it to save human life. Saving of life of human being is given paramount importance," Justice Bhushan, who authored the 160-page judgment for the Bench, emphasised.

But the court held that the powers of the States under the Disaster Management Act do not extend to promoting students on the sole basis of their internal assessment without taking exams.

"When the State Disaster Management Authority and State government take a decision that for mitigation or prevention of disaster it is not possible to hold physical examination in the State, the decision is within the four corners of Disaster Management Act, 2005. However, their decision that students should be promoted without appearing in the final year examination is not within the domain of the Act," the Bench, including Justices R. Subhash Reddy and M.R. Shah, concluded.

In future, if any State found it impossible to conduct the exams by September 30 and wanted to postpone them, it could apply to the UGC, which would consider the request and decide at the earliest, the court directed.

Justice Bhushan, however, disagreed that the revised UGC guidelines was "unreasonable" and a violation of the right to life of students and examiners.

The July 6 guidelines were based on the recommendations of the R.C. Kuhad Expert Committee, the court pointed out.

CONTINUED ON ▸ PAGE 12
ALL SAFETY MEASURES IN PLACE, SAYS POKHRIYAL ▸ PAGE 13

# Six States move Supreme Court on NEET, JEE

The petition comes shortly after a meeting among Congress chief Sonia Gandhi and six Chief Ministers of non-BJP States.

JEE is slated to be conducted over 660 exam centres with 9.53 lakh students taking it. This would be roughly 1,443 students in every centre. Similarly, NEET will see 15.97 lakh students in 3,843 centres across the country, nearly 415 students per centre.

"The Union Government had adequate time to make comprehensive preparations for the safe and successful conduct of the examinations. However, the intervening months from April to September were characterised by inaction, confusion, lethargy and inertia," the petitioners submitted.

They said the Centre had suddenly woken up to hurriedly fix the exam dates, realising that its inertia would cost lakhs of students their career. "The remedy will prove to be worse than the disease itself," the petition said.

**'Situation is grave'**

The Ministers said they do not want to launch a "political criticism" or make any "value judgments" of the Central government. All they wanted to do was impress on the court the fact that the rise in COVID-19 cases continued to be exponential since April. The situation was grave enough to recall or postpone the exams. The petition has been filed seeking a review of the top court's order on August 17 refusing to entertain a petition by students to postpone NEET and JEE.

FROM PAGE ONE

# States can apply to UGC for extension of deadline

They were issued in the interests of students. They provided three modes of examination – pen and paper, online and blended (both physical and online). A "special chance" was also given to students unable to take the exams.

### Time given to varsities

It said universities were moreover given time from July 31 to September 30 for preparations.

Justice Bhushan drew attention to clause 6 of the revised guidelines, which insists that exams can be held only if universities follow the safety protocols. The Centre, too, had pitched in with guidelines.

"The Standard Operating Procedure for conduct of examination makes it abundantly clear that the UGC, MHRD [Ministry of Human Resource Development] and the Ministry of Health and Family Welfare were fully concerned with the health of students and exam functionaries," the court held.

Justice Bhushan said the UGC was well within its rights to fix "uniform" dates for the exams despite some States being worse off.

"The UGC had rightly fixed a date for completion of the final-year examination throughout the country to maintain uniformity in the academic calendar," Justice Bhushan justified.

The court said the July 6 guidelines did not discriminate against final year students by compelling them to take exams while their juniors were promoted on their internal assessment marks.

### For future career

"Final year exam is an opportunity for a student to show his optimum calibre. It paves his future career both in academics and employment," Justice Bhushan noted.

The court held that the UGC was not obliged to consult universities or States before the issuance of the July 6 guidelines.

Besides, States and universities cannot dismiss UGC guidelines as being merely advisory. They were necessary for the "determination of standards in institutions of higher education".